ಶ್ರೀ ಬಿ.ಎಂ. ಇದಿನಬ್ಬ (ಕೆ. ಕೇಶವ ಇವರ ಪರವಾಗಿ) —

ಪುತ್ತೂರು ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು

೧೪೬೫. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು, ಪೂಚಪ್ಪಾಡಿ, ಬೆಳ್ಳಿನೆರೆ, ಕೈಕಂಬ ಎಂಬಲ್ಲಿ ಕೃಷಿಕರು ನೀರಾವರಿ ಪಂಪುಸೆಟ್ಟು ಪಡೆದು ೫ ವರ್ಷಗಳಾದರೂ ಸದರಿಯವರಿಗೆ ವಿದ್ಯುತ್ ಸರಬರಾಜು ನೀಡದೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ಸ್ಥಳಗಳಲ್ಲಿ ವಿದ್ಯುತ್ ಒದಗಿಸಲು ವಿಳಂಬವಾಗಲು ಕಾರಣಗಳೇನು ?

ಇ) ಈ ವಿಳಂಬ ನೀತಿಗೆ ಇಲಾಖೆಯ ಮೇಲಾಧಿಕಾರಿಗಳು ಏನಾದರೂ ಕ್ರಮ ಕೈಗೊಂಡು ಕೂಡಲೇ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಈ ಗ್ರಾಮಗಳಲ್ಲಿ ೫ ವರ್ಷ ಬಾಕಿಯ ನೀರಾವರಿ ಪಂಪುಸೆಟ್ಟುಗಳ ಬಾಕಿ ಪ್ರಕರಣಗಳಿಲ್ಲ. ಸಪಣೂರಿನಲ್ಲಿ ಹಳೆಯ ಬಾಕಿಯಾದ ೧೦ ಪಂಪುಸೆಟ್ಟುಗಳ ಕೆಲಸವನ್ನು ಪುತ್ತೂರಿನ ಮಾನ್ಯತೆ ಪಡೆದ ಗುತ್ತಿಗೆದಾರರಿಗೆ ಕಳೆದ ಮಾರ್ಚಿಯಲ್ಲಿ ಗುತ್ತಿಗೆಯ ಮೇಲೆ ನೀಡಲಾಗಿದ್ದು ಇದು ಇನ್ನೂ ೪ ತಿಂಗಳೊಳಗೆ ಮಾಡಿ ಪೂರೈಸಲಾಗುತ್ತದೆ. ಇದಲ್ಲದೆ ೧೧ ಪ್ರಕರಣಗಳಲ್ಲಿ ಕಾರ್ಪೂ ದೇಶ ೧೯೮೮ರ ಮಾರ್ಚ್‌ನಲ್ಲಿ ನೀಡಲಾಗಿದ್ದು ಅವುಗಳನ್ನು ಈ ಸಾಲಿನಲ್ಲಿ ಮಾಡಲಾಗುತ್ತದೆ.

ಪೂಚಪ್ಪಾಡಿಯಲ್ಲಿ ೧೯೮೮ರ ಮಾರ್ಚ್‌ನಲ್ಲಿ ಕಾರ್ಯಾದೇಶ ನೀಡಿದ್ದ ೮ ಪ್ರಕರಣಗಳನ್ನು ಗುತ್ತಿಗೆದಾರರಿಗೆ ವಹಿಸಿದ್ದು ೧೯೮೮ ಜೂನ್ ಕೊನೆಯೊಳಗೆ ಮುಗಿಸಲಾಗುತ್ತದೆ. ಬೆಳ್ಳಿನೆರೆ–ಕೈಕಂಬಗಳಲ್ಲಿ ೧೯೮೭ರ ಅಕ್ಟೋಬರ್‌ನಲ್ಲಿ ಮಂಜೂರಾದ ೭೭ ಪ್ರಕರಣಗಳಿದ್ದು ಅವುಗಳನ್ನು ಈಗ ಗುತ್ತಿಗೆದಾರರಿಗೆ ವಹಿಸಲಾಗಿದೆ. ಇವುಗಳನ್ನು ಇನ್ನು ೬ ತಿಂಗಳುಗಳಲ್ಲಿ ಮುಗಿಸಲಾಗುತ್ತದೆ. ಆದರೆ ಇದು ಅರಣ್ಯ ಇಲಾಖೆಯಿಂದ ಕಾಡು ತೆಗೆಯಲು ಒಪ್ಪಿಗೆ ನೀಡಿಕೆಯನ್ನು ಅವಲಂಭಿಸಿದೆ.

ಆ) ರಾಜ್ಯದಲ್ಲಿ ಮುಂಗಾರು ವಿಫಲವಾದುದರಿಂದ ಪಂಪುಸೆಟ್ಟುಗಳಿಗೆ ವಿದ್ಯುತ್ತಿನ ಬೇಡಿಕೆ ಅಪಾರವಾಗಿದೆ. ನೋಂದಾಯಿಸಲ್ಪಡುವ ಅರ್ಜಿಗಳ ಸಂಖ್ಯೆ ವಾರ್ಷಿಕ ಗುರಿಯ ೧½ (ಒಂದೂವರೆ) ಪಟ್ಟಿಗಳಷ್ಟಾಗುತ್ತಿದೆ. ಇದರಿಂದ ಹಲವಾರು ಪ್ರಕರಣಗಳಲ್ಲಿ ವಿಳಂಬ ಅನಿವಾರ್ಯ.

ಇ) 'ಅ'ನ ಉತ್ತರದಲ್ಲಿ ತಿಳಿಸಿರುವಂತೆ ಬಾಕಿ ಉಳಿದಿರುವ ಪ್ರಕರಣಗಳಿಗೆಲ್ಲಾ ವಿದ್ಯುತ್ ಸರಬರಾಜು ಕಾರ್ಯ ಮಾಡಲು ಕ್ರಮ ಕೈಗೊಳ್ಳಲಾಗಿದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀ ಬಿ. ಬಸವಲಿಂಗಪ್ಪನವರ ಪರವಾಗಿ).—

ಈಗಾಗಲೇ ನಾನು ಹೇಳಿದ ಹಾಗೆ ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕ ೧೯೮೭ ಈಗಾಗಲೇ ಎರಡೂ ಸದನದಲ್ಲಿ ಪಾಸ್ ಆಗಿ ಕೇಂದ್ರ ಸರ್ಕಾರದ ಮುಂದೆ ಒಪ್ಪಿಗೆಗಾಗಿ ಕಾಯಲಾಗುತ್ತಿದೆ. ಈ ವಿಧೇಯಕದ ಪ್ರಕಾರ ಯಾವುದೇ ವ್ಯಕ್ತಿ ಸರ್ಕಾರದ ಜೊತೆ ಮಾಡಿಕೊಂಡ ಕರಾರನ್ನು ಮುಂದುವರಿಸುವುದಾದರೆ ಅಥವಾ ರದ್ದು ಮಾಡುವುದಾದರೆ ಪರಿಸರ ಪರಿಣಾಮದ ಕಾರ್ಯಾನಂತರ ದೃಷ್ಟಿಯಿಂದ ಎಲ್ಲಾ ಅಧಿಕಾರವನ್ನು ಸರ್ಕಾರ ತೆಗೆದುಕೊಂಡಿದೆ. ಈ ವಿಧೇಯಕ ಪಾಸ್ ಆದಾಗ ಯಾವುದೇ ರೀತಿಯ ತೊಂದರೆಗೂ ಕಾರಣ ಇಲ್ಲ. ಇನ್ನೊಂದು ಇಂತಹ ಯಾವುದೇ ಉದ್ದಿಮೆಗೂ ಸರ್ಕಾರದ ಆದೇಶವನ್ನು ಮೀರಲಿಲ್ಲ. ಮೀರಿದ ಯಾವುದೇ ನಿರ್ದಿಷ್ಟ ಕಾರಣಗಳು ಬಂದರೆ ಜಾಗರೂಕತಾ ಕ್ರಮವನ್ನು ಕೈಗೊಳ್ಳಲಾಗುವುದು

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಇಲ್ಲಿಯವರೆಗೆ ಒಂದೂ ಉದಾಹರಣೆ ಬಂದಿಲ್ಲವೇ, ಏಕೆಂದರೆ ವಿಧೇಯಕ ಪಾಸ್ ಆಗಿ ಬರಬೇಕಾದರೆ ನಿಮಗೆ ಗೊತ್ತು ಅದು ೩ ತಿಂಗಳು ಆಗಬೇಕಾಗುತ್ತದೆ ೬ ತಿಂಗಳೂ ಆಗಬಹುದು. ಇದುವರೆಗೆ ಒಂದೂ ಸರ್ಕಾರದ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಕೇಳುತ್ತೇನೆ.

ಶ್ರೀ ಜೆ.ಎಸ್. ಬಾಗಲಕೋಟ್.—ಅಂತಹ ಯಾವುದೇ ಕಂಪ್ಲೇಟ್ ಬಂದರೂ ಅದನ್ನು ಆಯಾಯ ಕಾಲದಲ್ಲಿಯೇ ನಿಶ್ಚಿತವಾಗಿ ಕ್ರಮಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನನ್ನ ಪೂಹಿಶಿ ಪ್ರಕಾರ ಇಂತಹ ಯಾವುದೇ ಕ್ರಮ ಇದುವರೆಗೆ ಜರುಗಿಲ್ಲ.

ಹಾಲು ಉತ್ಪಾದಕರ ಸಹಕಾರ ಸಂಘಗಳು

೧೩೫೫. ಶ್ರೀ ಎನ್. ಟಿ. ಬೊಮ್ಮಣ್ಣ (ಕೂಡ್ಲಿಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಪಶ್ಚಿ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧೀನದಲ್ಲಿರುವ ಡೈರಿಗಳ ಸಂಖ್ಯೆ ಎಷ್ಟು ?

ಆ) ಬೆಂಗಳೂರು ಡೈರಿ ಮತ್ತು ಯಲಹಂಕದಲ್ಲಿರುವ ಮದರ್ ಡೈರಿಗಳು ಇದರ ಅಧೀನದಲ್ಲಿವೆಯೆ?

ಇ) ಇಲ್ಲದಿದ್ದಲ್ಲಿ ಈ ಎರಡು ಡೈರಿಗಳನ್ನು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ವಹಿಸಿ ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತರ ಅಧೀನದಲ್ಲಿ ೭ ಡೈರಿಗಳು ಹಾಗೂ ಎರಡು ಪ್ರತ್ಯೇಕ ಪ್ಯಾಡಕ್ಟ್ ಡೈರಿಗಳಿವೆ.

ಆ) ಹೌದು.

ಇ) ಬೆಂಗಳೂರಿನ ಡೈರಿಯ ಹಸ್ತಾಂತರ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಟಿ. ಬೊಮ್ಮಣ್ಣ.—ಮಾನ್ಯ ಅಧ್ಯಕ್ಷರೇ, ಯಲಹಂಕದಲ್ಲಿರುವ ಮದರ್ ಡೈರಿಯನ್ನು ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಲಿಗೆ ಸಂಪೂರ್ಣವಾಗಿ ವಹಿಸಿಕೊಡಬೇಕು. ವಹಿಸಿ ಕೊಡದಿದ್ದರೆ ಕೂಡಲೇ ವಹಿಸಿಕೊಡುವ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮದರ್ ಡೈರಿಯನ್ನು ಬಿಟ್ಟು ಬೆಂಗಳೂರು ಡೈರಿಯನ್ನು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ವರ್ಗಾಯಿಸಬೇಕೆಂದು ಒಂದು ನಿರ್ಣಯ ಮಂತ್ರಿ ಮಂಡಲದ ಮುಂದೆ ಇದೆ. ಅದರ ನಿರ್ಣಯ ಬಂದ ಕೂಡಲೇ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಟಿ. ಬೊಮ್ಮಣ್ಣ.—ಬೆಂಗಳೂರು ಡೈರಿಯನ್ನು ಹಸ್ತಾಂತರಿಸುವ ತೀರ್ಮಾನ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದೀರಿ, ಯಾವಾಗ ಅದನ್ನು ಹಸ್ತಾಂತರ ಮಾಡುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಅದು ಒಪ್ಪಿಗೆಗಾಗಿ ಮಂತ್ರಿಮಂಡಲದ ಮುಂದೆ ಇದೆ; ಸಧ್ಯದಲ್ಲಿದೆಯೇ ಮಂತ್ರಿಮಂಡಲದ ನಿರ್ಣಯ ತೆಗೆದುಕೊಳ್ಳುತ್ತದೆ, ನಂತರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಟಿ. ಬೊಮ್ಮಣ್ಣ.—ತಮಿಳುನಾಡಿನ ಈರೋಡ್‌ನಿಂದ ಬೆಂಗಳೂರು ನಗರಕ್ಕೆ ಪ್ರತಿ ದಿನ ಸಾವಿರಾರು ಲೀಟರ್ ಹಾಲು ಸರಬರಾಜು ಆಗುತ್ತಾ ಇದೆ. ಇದು ಕಳಪೆ ದರ್ಜೆಯ ಹಾಲಾಗಿದ್ದು, ಇದನ್ನು ನಿಲ್ಲಿಸಿದರೆ ಬೆಂಗಳೂರು ಹಾಗೂ ಮದರ್ ಡೈರಿಯ ಹಾಲಿನ ಬೇಡಿಕೆ ಹೆಚ್ಚಾಗುತ್ತದೆ ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕ್ರಮ ತೆಗೆದುಕೊಳ್ಳುತ್ತೇನೆ.